ಅರುಂಧತಿ

(ಹಳೆಯ ಹಾಡು)

ಸಂಪಾದಕ :
ಶ್ರೀ ಎಲ್. ಗುಂಡಪ್ಪ, ಎಂ. ಎ.

ಪ್ರಕಾಶಕರು :
ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು ನಗರ.

ಬೆಲೆ : ನಾಲ್ಕಾಣೆ.

ಅರುಂಧತಿ

(ಹಳೆಯ ಹಾಡು)

ಸಂಪಾದಕ :

ಶ್ರೀ ಎಲ್. ಗುಂಡಪ್ಪ, ಎಂ. ಎ.

ಪ್ರಕಾಶಕರು :

ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು ನಗರ.

ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು ಸಿಟಿ.

೧೯೩೧.

ಅರುಂಧತಿ

'ಋಷಿಮೂಲ ನದೀಮೂಲಗಳನ್ನು ಹುಡುಕಬಾರದು' ಎಂದು
ಂದು ಹೇಳಿಕೆ ಬಳಕೆಯಲ್ಲಿದೆ. ಹುಡುಕಿ ನೋಡಿ ಮೂಲವನ್ನು ಕಂಡು
ಾಂಡಮೇಲೆ ಅವರ ವಿಷಯವಾಗಿ ನಮ್ಮಲ್ಲಿರುವ ಪೂಜ್ಯ ಭಾವನೆ
ಿಮೆಯಾದೀತು, ಅವರ ಮಹತ್ತ್ವದಲ್ಲಿ ನಮ್ಮ ನಂಬಿಕೆ ಸಡಿಲ
ದೀತು, ಅವರ ಮೂಲಕ ನಮಗೆ ಆಗಬೇಕಾದ ಶ್ರೇಯಸ್ಸಿಗೆ ಲೋಪ
ರೀತು– ಎಂಬ ಹೆದರಿಕೆಯೇ ಈ ಹೇಳಿಕೆಗೆ ಕಾರಣವಾಗಿರಬಹುದು.
ಮಾನ್ಯ ಜನರ ವಿಷಯದಲ್ಲಿ ಈ ಹೆದರಿಕೆಗೆ ಆಧಾರವಿಲ್ಲದೆ ಇಲ್ಲ.
ನ ರೋಗವನ್ನು ವಾಸಿಮಾಡುವ ಔಷಧಿ ತಾವು ಕಸವೆಂದು ಕಡೆಗಣಿ
ರ ತಮ್ಮ ಹಿತ್ತಲ ಗಿಡದ ಸೊಪ್ಪಿನಿಂದಲೇ ಮಾಡಿದ್ದೆಂದು ತಿಳಿದರೆ
ಯ್ಯೋ! ಇಷ್ಟೆಯೇ!' ಎಂದು ಅಸಡ್ಡೆ ತೆ ರಿಸುವುದು ಜನ
ಮಾನ್ಯದ ರೂಢಿ. ಹಾಗೆಯೇ, ಯಾರಾದರೊಬ್ಬ ದೊಡ್ಡ ಅಧಿಕಾರಿ
ವಾ ಪ್ರಖ್ಯಾತ ಪುರುಷನು ಚಿಕ್ಕಂದಿನಲ್ಲಿ ತಾವು ಕಡೆಗಣಿಸಿಸುವಂಥ
ುಸ್ಥಿತಿಯಲ್ಲಿದ್ದವನೆಂದು ತಿಳಿದುಬಂದರೆ, 'ಓಹೋ! ಅವನೇ? ನನ್ನ
ಮುಂದಿನ ಹುಡುಗ ನಮ್ಮ ಬೀದಿಯಲ್ಲೇ ಬೆತ್ತಲೆ ಓಡಾಡುತ್ತಿದ್ದ.
ಪ ... ಭಿಕ್ಷಾನ್ನಕ್ಕೆ ಬರುತ್ತಿದ್ದ...." ಎಂದು ಮುಂತಾಗಿ ಆಡಿ
ಳ್ಳುವ ಜನರೂ ಬಹಳ ಇದ್ದಾರೆ. ಇಂಥವರಿಗೆ ದೊಡ್ಡವರ ದೊಡ್ಡ
ಗೋಚರಕ್ಕೆ ಬರುವುದು ಕಷ್ಟ.

ಮಹಾ ಪುರುಷರಲ್ಲಿಯೂ ಪವಿತ್ರ ತೀರ್ಥಕ್ಷೇತ್ರಾದಿಗಳಲ್ಲಿಯೂ
ಾವಿಕವಾಗಿಯೇ ಇದ್ದಿರಬಹುದಾದ ಕೆಲವು ಕುಂದುಕೊರತೆಗಳಿಂದ
ರ ಭಕ್ತಿ ಚಲಿಸದಿರಲೆಂಬ ಉದ್ದೇಶದಿಂದ ಈ ಮಾತು ಹುಟ್ಟಿತೆನ್ನ
ದು. ಮೂಲವನ್ನು ಹುಡುಕದಿರುವುದೊಂದೇ ಅಲ್ಲ, ಅದ್ಭುತ
ಗಳನ್ನೂ ಮಹಾಮಹಿಮೆಗಳನ್ನೂ ಆರೋಪಿಸುವುದೂ ರೂಢಿಗೆ

ಬಂತು. ಇಷ್ಟಾದರೂ ಕುಂದೆನ್ನಬಹುದಾದ ಸಂಗತಿಯೇನಾದರೂ ಉಳಿದುಬಿಟ್ಟರೆ, ಅದೇ ಒಂದು ಮಹಿಮೆಯೆಂದು ಸಾಧಿಸುವುದೂ ಕಂಡುಬರುತ್ತದೆ. ರಾಮಕೃಷ್ಣಾದಿ ಅವತಾರಿ ಪುರುಷರ ಚರಿತ್ರೆಯಲ್ಲಿ ಇಂಥ ಸಂಗತಿಗಳು ಅನೇಕ ದೊರೆಯುತ್ತವೆ.

ಸಾಮಾನ್ಯರು ತಪ್ಪು ತಿಳಿದಾರೆಂಬ ಭೀತಿಯಿಂದ ಸತ್ಯವನ್ನು ಮರೆಮಾಡುವುದು ಉಚಿತವಾಗಲಾಗರದು. ಅಲ್ಲದೆ ಸಣ್ಣಪುಟ್ಟ ಕುಂದುಗಳು ತಿಳಿದುಬಂದ ಮಾತ್ರಕ್ಕೇ ನಿಜವಾಗಿಯೂ ಗೌರವ ಭಾವ ಕಡಮೆಯಾಗುವುದೆಂದು ಹೇಳಲಾಗುವುದಿಲ್ಲ. ಬೇರೊಂದು ರೀತಿಯಿಂದ ಅವರ ಮಹತ್ತ್ವ ಹೆಚ್ಚು ಸ್ಫುಟವಾಗಿ ಪ್ರಜ್ವಲಿಸುತ್ತದೆಯೆನ್ನಬಹುದು. ಉದಾಹರಣೆಗೆ-ವೇದಮಾತೆಯೆಂದು ಪ್ರಸಿದ್ಧವಾಗಿ ಪರಮಪಾವನವಾಗಿರುವ ಗಾಯತ್ರೀ ಮಂತ್ರವನ್ನು ಕಂಡು ಸಾರಿದ ವಿಶ್ವಾಮಿತ್ರ ಮಹರ್ಷಿ ಆದಿಯಲ್ಲಿ ಮಹಾಗರ್ವಿಯಾದ ಕ್ಷತ್ರಿಯನಾಗಿದ್ದನೆಂದು ಅರಿತರೆ, ಕೆಲವರು ಆ ಮಹರ್ಷಿಯಲ್ಲಿ ಸಣ್ಣತನವನ್ನು ಕಾಣಬಹುದು. ಆದರೆ,ಆತನು ತನ್ನ ಕುಂದುಕೊರತೆಗಳನ್ನೆಲ್ಲ ಒಂದೊಂದಾಗಿ ಕಳೆದುಕೊಂಡು ಕ್ರಮಕ್ರಮವಾಗಿ ಆತ್ಮತೇಜಸ್ಸನ್ನು ಉಜ್ಜ್ವಲಗೊಳಿಸಿಕೊಂಡು ಬ್ರಹ್ಮರ್ಷಿಯಾದ ಸಾಹಸದ ಕಥೆಯನ್ನು ಕೇಳಿ ಮನನಮಾಡಿದರೆ, ಅವರೇ ಆತನ ಅಗಾಧ ಮಹಿಮೆಗೆ ನಮ್ರರಾಗಿ ತಲೆಬಾಗುವರೆಂಬುದರಲ್ಲಿ ಸಂಶಯವುಳಿಯುವುದಿಲ್ಲ. ಇದನ್ನು ನೆನೆದರೆ, ಋಷಿಮೂಲ ನದೀಮೂಲಗಳನ್ನು ಅರಿಯುವುದು ಶ್ರೇಯಸ್ಸಾಧನೆಗೆ ಮಾರ್ಗವಾಗುವುದೆಂದೂ ಹೇಳಬಹುದು.

ಪುರಾಣಗಳಲ್ಲೂ ಜನ ಬಳಕೆಯಲ್ಲೂ ಮಹಾಪುರುಷರಿಗೆ ಸಂಬಂಧಿಸಿದ ಅನೇಕ ಕಥೆಗಳು ಪ್ರಚಾರವಾಗಿವೆ. ಅವುಗಳಲ್ಲಿ ಕೆಲವು ಒಮ್ಮೊಮ್ಮೆ ಆ ಪುರುಷರಲ್ಲಿ ಕೆಲವು ಕುಂದುಕೊರತೆಗಳನ್ನೂ ತೋರಿಸುತ್ತವೆ. ಕುಂದಿದ್ದರೂ ಅವರು ಮಹಿಮಾವಂತರೆಂದು ಸಾರುತ್ತವೆ. ಅಂಥ ಒಂದು ಕಥೆಯನ್ನು ಜನ ಬಳಕೆಯ ಹಾಡಿನಿಂದ ಸಂಗ್ರಹಿಸಿ ಇಲ್ಲಿ ಕೊಟ್ಟಿದೆ.

ವಸಿಷ್ಠಋಷಿ ಬ್ರಹ್ಮನ ಮಾನಸಪುತ್ರರು; ಆರ್ಯ ಸಂಸ್ಕೃತಿಯ ಆದರ್ಶ ಪ್ರತಿನಿಧಿ ಮತ್ತು ಸಂರಕ್ಷಕರು; ಸಪ್ತರ್ಷಿಗಳಲ್ಲಿ ಅಗ್ರಗಣ್ಯರು.

ಅವರ ವಿಚಾರದಲ್ಲೂ, "ಊರ್ವಶೀ ಗರ್ಭಸಂಭೂತೋ ವಸಿಷ್ಠಶ್ಚ ಮಹಾಮುನಿಃ" ಎಂದು ಒಂದು ವಚನ ಕೇಳಬರುತ್ತದೆ. 'ದೇವ ಲೋಕದ ವೇಶ್ಯೆಯಾದ ಊರ್ವಶಿಯ ಹೊಟ್ಟೆಯಲ್ಲಿ ಹುಟ್ಟಿದವರು ವಸಿಷ್ಠ ಮಹಾಮುನಿ'—ಎಂಬ ಈ ಹೇಳಿಕೆ ಯಾವ ಪುರಾಣದಲ್ಲಿದೆಯೋ ಕಾಣೆ. ಅದನ್ನು ಸಮರ್ಥಿಸಬಹುದಾದ ಆಧಾರ ಏನಿದೆಯೋ ಅದೂ ಗೊತ್ತಿಲ್ಲ. ಈ ಮಾತು ಅವರ ಮಹಿಮೆಯನ್ನು ಹೆಚ್ಚಿಸುವುದಕ್ಕಾಗಿ ಹುಟ್ಟಿತೋ, ಅವರಲ್ಲಿ ದೋಷ ಬೆದಕಿ ವೈದಿಕ ಧರ್ಮವನ್ನು ಅವಹೇಳನ ಮಾಡುವುದ ಕ್ಕಾಗಿ ಹುಟ್ಟಿತೋ ಹೇಳಲಾಗುವುದಿಲ್ಲ. ಇದು ವಿಚಾರಾರ್ಹವಾಗಿದೆ.

ಇದೇ ರೀತಿ ವಸಿಷ್ಠ ಮಹರ್ಷಿಗಳ ಹೆಂಡತಿ ಅರುಂಧತಿಯನ್ನು ಕುರಿತ ಒಂದು ಕಥೆ ಈ ಹಾಡಿನಲ್ಲಿ ಕಂಡುಬರುತ್ತದೆ. ಅರುಂಧತಿ ಪತಿವ್ರತೆಯರಲ್ಲಿ ಅಗ್ರಗಣ್ಯಳು; ಪರಮ ಪವಿತ್ರಳು – ಎಂದು ಪ್ರಸಿದ್ಧಿ. ಮದುವೆಯಲ್ಲಿ ಕರ್ಮಕಲಾಪಗಳೆಲ್ಲ ಮುಗಿದಮೇಲೆ ಮುಕ್ತಾಯವಾಗಿ ಮದುಮಕ್ಕಳಿಗೆ ಅರುಂಧತೀದರ್ಶನ ಮಾಡಿಸುತ್ತಾರೆ. ಆದರ್ಶ ದಂಪತಿ ಗಳೆಂದೂ ದಾಂಪತ್ಯ ಧರ್ಮರಕ್ಷಕರೆಂದೂ ಅರುಂಧತೀವಸಿಷ್ಠರಿಗೆ ಪೂಜೆ ಮಾಡಿಸುತ್ತಾರೆ. ಈ ಅರುಂಧತಿಯ ಚರಿತ್ರೆಯನ್ನು ಸಂಸ್ಕೃತ ಪುರಾಣ ಗಳಲ್ಲಿ ವಿವರಿಸಿರುವುದು ನನ್ನ ಅರಿವಿಗೆ ಬಂದಿಲ್ಲ. ಆದ್ದರಿಂದ ಈ ಹಾಡಿನ ಕಥೆಗೆ ಆಧಾರ ಇದೆಯೋ ಇಲ್ಲವೋ ಕಾಣೆ.

ಹಾಡಿನ ಕಥೆ: ವಸಿಷ್ಠ ಋಷಿ ಮದುವೆಯಾಗ ಬಯಸಿ ತನಗೆ ತಕ್ಕ ಕನ್ಯೆ ಯನ್ನು ಹುಡುಕತೊಡಗಿದನು. ಬ್ರಹ್ಮ ಕ್ಷತ್ರ ವೈಶ್ಯ ಶೂದ್ರರಲ್ಲೆಲ್ಲ ಹುಡುಕಿ ನೋಡಿ ದನು; ದೇಶದೇಶ ಅಲೆದು ಶೋಧಿಸಿದನು. ಎಲ್ಲೂ ಯಾವ ವರ್ಣದಲ್ಲೂ ಋಷಿ ಯಿಟ್ಟ ಯೋಗ್ಯತಾ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಸಮರ್ಪಕವೆನ್ನಿಸಿದ ಕನ್ಯೆ ಸಿಕ್ಕ ಲಿಲ್ಲ. ಕಡೆಗೆ ಆತ ಚಂಡಾಲರ ಕೇರಿಗೆ ಹೋಗಿ ಒಬ್ಬ ಲಕ್ಷಣವಂತೆ ಕನ್ಯೆಯನ್ನು ಕಂಡು ಪರೀಕ್ಷಿಸಿದನು. ಋಷಿ ಕೊಟ್ಟ ಮರಳನ್ನು ಆಕೆ ತನ್ನ ದೇಹಾಗ್ನಿಯಿಂದಲೇ ಪಾಕ ಮಾಡಿದಳು. ಅದನ್ನು ಕಂಡು ಋಷಿ ಮೆಚ್ಚಿ ಅವಳನ್ನು ಮದುವೆ ಮಾಡಿ ಕೊಂಡನು. ಈ ಸಂಗತಿಯನ್ನರಿತು ಬ್ರಾಹ್ಮಣರೇ ಮೊದಲಾದ ಉತ್ತಮ ವರ್ಣ ದವರೆಲ್ಲ ಅಸಮಾಧಾನಗೊಂಡು ನಿಂದಿಸಿದರು; ವಸಿಷ್ಠರನ್ನು ಬಹಿಷ್ಕರಿಸಿದರು. ಸಮಾಜದ ನಿಂದೆ ಮತ್ತು ಬಹಿಷ್ಕಾರಗಳಿಂದ ಆ ಪತ್ನಿ ತುಂಬ ನೊಂದುಕೊಂಡಳು; 'ಅಗ್ನಿ ಹವಿಸ್ಸನ್ನು ಸ್ವೀಕರಿಸಲಾಗದು' ಎಂದು ನುಡಿದು ಅಗ್ನಿಯನ್ನು ಸ್ತಂಭಿಸಿದಳು.

ಆಗ ಮೂರು ಲೋಕದವರಿಗೂ ಬೆಂಕಿಯಿಲ್ಲದೆ ಹೋಯಿತು. ಅಗ್ನಿಹೋತ್ರಾದಿ ವೈದಿಕ ಕರ್ಮಗಳಿಗೂ ಉಳಿದ ನಿತ್ಯ ವ್ಯವಹಾರಗಳಿಗೂ ಅವಕಾಶವಿಲ್ಲವಾಯಿತು. ಆಗ ಸುರ ನರರೆಲ್ಲರೂ ವಸಿಷ್ಠ ಸತಿಯ ಮಹಿಮೆಯನ್ನರಿತು ಅವರ ಮನೆಗೆ ಬಂದರು; ಅಗ್ನಿಯನ್ನು ತರಿಸಿಕೊಡಬೇಕೆಂದು ಪ್ರಾರ್ಥಿಸಿದರು. ವಸಿಷ್ಠರ ಅಪ್ಪಣೆಯಪ್ರಕಾರ ಆಕೆ ಆಹ್ವಾನಿಸಲು ಆಕೆಯ ಕರಸ್ಥಳದಲ್ಲಿ ಅಗ್ನಿ ಮೂಡಿದನು. ಆಮೇಲೆ ಆಕೆ ಅಡಿಗೆ ಮಾಡಿ ಬಡಿಸಿದಳು; ಅಗ್ನಿಯನ್ನರ್ಪಿಸಿದಳು. ಇಂದ್ರನು ಆಕೆಯ ಮಹಿಮೆಯನ್ನು ಕೊಂಡಾಡಿ ಆಕೆಗೆ 'ಅರುಂಧತಿ' ಎಂದು ಹೆಸರಿಟ್ಟನು. ಬಂದವರೆಲ್ಲ ಉಂಡು ತೃಪ್ತರಾಗಿ ಆಕೆಯನ್ನು ಹೊಗಳುತ್ತ ಹೊರಟುಹೋದರು.

ನಮ್ಮ ಸಮಾಜ ಎಷ್ಟೋ ಸಾವಿರ ವರ್ಷಗಳಿಂದ ಬೆಳೆದುಬರುತ್ತಿದೆ. ಈ ದೀರ್ಘ ಕಾಲಾವಧಿಯಲ್ಲಿ ಸಮಾಜದಲ್ಲಿ ಎಷ್ಟೋ ಮಾರ್ಪಾಟುಗಳಾಗಿವೆ; ಈಗಲೂ ಆಗುತ್ತಿವೆ. ಅವುಗಳಲ್ಲಿ ಒಂದು ಸುಧಾರಣೆಯ ವಿಚಾರ ಈ ಹಾಡಿನಲ್ಲಿ ಪ್ರಸ್ತಾಪಿಸಲಾಗಿದೆಯೆಂದು ತೋರುತ್ತದೆ. ಮೇಲ್ಜಾತಿಯವರು ಕೆಳಜಾತಿಯ ಹೆಣ್ಣು ತಂದುಕೊಳ್ಳುವುದು ಒಂದು ಕಾಲದಲ್ಲಿ ರೂಢಿಯಾಗಿತ್ತು. ಆಗಲೂ "ಸ್ತ್ರೀರತ್ನಂದುಷ್ಕುಲಾದಪಿ"– ಅತ್ಯಂತಕೆಳಜಾತಿಯೆಂದು ಭಾವಿಸಿದ್ದ ಚಂಡಾಲರ ಮನೆಯ ಹೆಣ್ಣು ತರುವುದು ಬಳಕೆಯಿರಲಿಲ್ಲ. ಅಂಥ ಸಂಬಂಧವೂ ಆಗಬಹುದೆಂಬ ಸುಧಾರಣೆ ತಲೆಯಿಟ್ಟಾಗ ಈ ಕಥೆ ಕಟ್ಟಿದ್ದರೂ ಇರಬಹುದು. ಆಗಲೂ ಅದು ಜನಪ್ರಿಯವಾಗಿರಲಿಲ್ಲವೆಂದು ಕಾಣುತ್ತದೆ. ಆಗಿಹೋದ ಯಾವುದೋ ಒಂದು ಸಂಗತಿಯನ್ನು ಏನೋ ಒಂದು ಬಗೆಯಿಂದ, ವಿನಾಯಿತಿಯೆಂಬ ರೀತಿಯಿಂದ, ಒಪ್ಪಿಕೊಂಡಂತೆ ಕಾಣುತ್ತದೆ. ಈ ಕಥೆಯ ಕನ್ಯೆ ತನ್ನ ದೇಹಾಗ್ನಿಯಿಂದಲೇ ಮರಳನ್ನು ಅಟ್ಟು ಬಡಿಸಿದ ಬಲ್ಮೆಯವಳಾದ್ದರಿಂದಲೇ ಅವಳ ಚಂಡಾಲಜನ್ಮ ಗಣನೆಗೆ ಬರಲಿಲ್ಲವೆಂಬ ಸೂಚನೆ ಸ್ಪಷ್ಟವಾಗಿದೆ.

ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆ ಹಿಂದಿನಿಂದಲೂ ಇದ್ದೇ ಇದೆ. ಶ್ರೀ ಶಂಕರಾಚಾರ್ಯರ ಚರಿತ್ರೆಯಲ್ಲಿ ಬರುವ, ಕಾಶಿಯಲ್ಲಿ ನಡೆದ 'ಶಂಕರ - ಚಂಡಾಲ ಸಂವಾದ'ದಲ್ಲೂ ಇದು ಪ್ರಸ್ತಾಪಿಸಲಾಗಿದೆ. ಅಲ್ಲಿ, 'ಅಂತ್ಯಜೋಽಯಮಿತಿ ಸಂಪ್ರತಿ ಬುದ್ಧಿಂ ಸಂತ್ಯಜಾಮಿ ವಚಸಾತ್ಮವಿ

ದಸ್ತೇ'* (ಇವನು ಅಂತ್ಯಜ ಎಂಬ ಬುದ್ಧಿಯನ್ನು ಆತ್ಮಜ್ಞಾನಿಯಾದ ನಿನ್ನ ಮಾತಿನ ಪ್ರಕಾರ ಈಗ ಬಿಟ್ಟುಬಿಡುತ್ತೇನೆ) ಎಂದು ಶ್ರೀ ಶಂಕರಾಚಾರ್ಯರು ಹೇಳಿದಾಗಲೇ ಅಸ್ಪೃಶ್ಯತೆಯ ಬುಡ ಸಡಿಲಿತು. ಶ್ರೀ ರಾಮಾನುಜಾಚಾರ್ಯರು ಚಂಡಾಲರಿಗೂ ದೇವಾಲಯ ಪ್ರವೇಶವನ್ನು ಅನುಗ್ರಹಿಸಿದರು. ಶ್ರೀ ಬಸವಣ್ಣನವರು ಆರಂಭಿಸಿದ ಸಮಾಜ ಸುಧಾರಣೆಯಲ್ಲಿ ಅವರು ಬ್ರಾಹ್ಮಣ–ಚಂಡಾಲರಲ್ಲಿ ವಿವಾಹ ಸಂಬಂಧವನ್ನೂ ಏರ್ಪಡಿಸಿದರು. ಆಗ ಒಂದು ಕ್ರಾಂತಿಯೇ ಆಯಿತು. ಆದರೂ ಇದು ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ಗಾಂಧಿಜಿಯವರ ಸಂತತ ಪ್ರಯತ್ನದ ಫಲವಾಗಿ ಅಸ್ಪೃಶ್ಯತಾ ನಿವಾರಣೆಯ ತತ್ತ್ವ ಚೆನ್ನಾಗಿ ಪ್ರಚಾರವಾಗಿದೆ. ಅನುಷ್ಠಾನದಲ್ಲಿ ಮಾತ್ರ ಹಲವು ತೊಡಕುಗಳು ತಲೆಯೆತ್ತಿವೆ; ಹಲವು ದೋಷಗಳು ಹೊರಹೊಮ್ಮುತ್ತಿವೆ. ಈ ಕಾಲದಲ್ಲಿ ಹುರುಪಿಗೊಳಗಾಗಿ ಸುಧಾರಣೆಯ ಹೊರರೂಪಕ್ಕೆ ಮಾತ್ರವೇ ಹೆಚ್ಚು ಗಮನ ಕೊಟ್ಟು ಅಂತಃಪರಿವರ್ತನೆಯ ಕಡೆಗೆ ಬಹು ಮಟ್ಟಿಗೆ ಉದಾಸೀನರಾಗಿರುವುದು ಕಂಡುಬರುತ್ತಿದೆ. ದೇವಾಲಯ ಪ್ರವೇಶದ ಹಕ್ಕು ಸ್ಥಾಪಿಸುವ ಭರದಲ್ಲಿ, ಅದಕ್ಕೆ ಕೊಡುತ್ತಿರುವ ಮಹತ್ತ್ವದಲ್ಲಿ ಹತ್ತರಲ್ಲಿ ಒಂದು ಪಾಲನ್ನು ಹಾಗೆ ದೇವಾಲಯಕ್ಕೆ ಹೋಗುವಾಗಿನ ಕರ್ತವ್ಯಕ್ಕೆ— ಶುಚಿ, ಭಕ್ತಿ, ಸದಾಚಾರ ಪಾಲನೆ, ಮೊದಲಾದುವಕ್ಕೆ — ಕೊಟ್ಟರೆ ಸಮಾಜ ನಿಜವಾಗಿಯೂ ಪುನೀತವಾಗುತ್ತದೆ. ಈ ಹಾಡಿನಲ್ಲಿ ಸೂಚಿತವಾಗಿರುವಂತೆ ವಸಿಷ್ಠಮುನಿ ಚಂಡಾಲ ಕನ್ಯೆಯ ಸದ್ಗುಣಗಳು ಮುಖ್ಯವೆಂದು ಭಾವಿಸಿದರೆಂಬ ಮಾತನ್ನು ಮರೆಯದಿರುವುದು ಒಳ್ಳೆಯದು.

ಈ ಹಾಡಿನ ಕಥೆಯ ಸತ್ಯಾಸತ್ಯತೆಗಳನ್ನು ಕುರಿತು ಚರ್ಚಿಸುವ ಗೋಜಿಗೆ ಹೋಗುವುದಿಲ್ಲ. ಅದರ ತತ್ತ್ವಾರ್ಥವನ್ನು ಅರಿತರೆ ಸಾಕೆಂದು ಬಿನ್ನಯಿಸಿ ಹಾಡನ್ನು ಜನತೆಯ ಮುಂದಿಡುತ್ತೇನೆ.

ಈ ಹಾಡನ್ನು ನನ್ನ ತಮ್ಮ ಮುತ್ತುರಾಮಸ್ವಾಮಿ ಇಬ್ಬರು ಸೋದರಿಯರಿಂದ ಹೇಳಿಸಿ ಬರೆದುಕೊಂಡನು. ಇಬ್ಬರೂ ಬೇರೆ ಬೇರೆ ಕಡೆಯವರು. ಇಬ್ಬರ ಹಾಡುಗಳೂ ಒಂದಕ್ಕೊಂದು ಪೂರಕವಾಗಿವೆ. ಒಂದರ

ಲ್ಲಿರುವ ಎಷ್ಟೋ ನುಡಿಗಳು ಇನ್ನೊಂದರಲ್ಲಿಲ್ಲ. ಎರಡರಲ್ಲೂ ಇರುವವನ್ನು ಸೇರಿಸಿದರೂ ಹಾಡು ಪೂರ್ತಿಯಾಗುವುದಿಲ್ಲ; ಅಲ್ಲಲ್ಲೇ ಅರಕೆ ಉಳಿದೇ ಇದೆ. ಮುಖ್ಯವಾಗಿ ಪೀಠಿಕಾ ಭಾಗ ಅರ್ಥವಾಗುವುದಿಲ್ಲ. ಎಷ್ಟೋ ಮಾತುಗಳು ಬಿಟ್ಟುಹೋಗಿ, ರೂಪ ವಿಕಾರಹೊಂದಿ, ಅಭಿಪ್ರಾಯವೂ ಸ್ಪಷ್ಟವಾಗುವುದಿಲ್ಲ. ಇನ್ನೂ ಸಮಗ್ರವಾಗಿ ಹಾಡನ್ನು ಬಲ್ಲವರು ಬರೆದು ಕಳಿಸಿದರೆ ತುಂಬ ಉಪಕಾರವಾಗುತ್ತದೆ. ಇನ್ನೂ ನಾಲ್ಕಾರು ಪಾಠಗಳನ್ನು ಕಲೆಹಾಕಿದಮೇಲೆ, ಪರಿಷ್ಕಾರಗೊಳಿಸಿ ಪ್ರಕಟಿಸಲು ಅನುಕೂಲವಾಗುತ್ತದೆ. ಅಲ್ಲಿಯವರೆಗೆ ಇಷ್ಟರಲ್ಲಿ ತೃಪ್ತಿಪಟ್ಟುಕೊಳ್ಳಬೇಕಾಗಿದೆ.

ಅರುಂಧತಿ

(ತ್ರಿಪದಿ ಛಂದಸ್ಸು)

ಪ್ರಾರ್ಥನೆ

ಗಿರಿಜೇ ಸುತನೇ ನಿಮ್ಮ ಚರಣಕ್ಕೆರಗುವೆ
ಕರದ ಪುಸ್ತಕದ ವಾಗ್ದೇವಿ । ಕಥೆಯು
ಪರಿಪೂರ್ಣವಕ್ಕು ಜಯವಾಗು ೧

ದೇವದೇವೋತ್ತಮನೆ ಶ್ರೀವನಿತೆಯರಸನೆ
ಶ್ರೀ ವೆಂಕಟಾದ್ರಿ ಪತಿಯೆ । ನಮಿಸಿ ಪರಮ
ಪಾವನ ಚರಿತ್ರೆಯ ಪೇಳ್ವೆ ೨

* ಪೀಠಿಕೆ

ಧರೆಯೊಳುತ್ತಮವಾದ ಧರಣಿಸುತೆ ತಾನೊಬ್ಬಳು;
ವರತನುಜೆ ಉಮ್ಮಳಿಸುತಿರಲಾಗ
ತರುಣಿಯನೆ ತಿಳುಹಬೇಕೆಂದ ೩

ನಾ ಪೇಳುವಂದದಲಿ ಬೇಕೆಂದು ಕೇಳಿದರೆ
ಸಾಕಾರವಾಗಿ ಧರೆಯೊಳಗೆ । ಉತ್ತಮ
ನಾಲ್ಕು ಸುಖವವರಿಗರುಹುಂಟೆ ೪

---

* ಈ ಪೀಠಿಕೆಯ ಪದ್ಯಗಳಲ್ಲಿ ತುಂಬ ತೊಡಕಿದೆ; ಯಾರು ಯಾರಿಗೆ ಹೇಳಿದರು ಮುಂತಾದ ಸಂಗತಿ ಸ್ಪಷ್ಟವಾಗುವುದಿಲ್ಲ. ಇದ್ದದ್ದನ್ನು ಇದ್ದ ಹಾಗೆಯೆ ಕೊಟ್ಟಿದೆ.

ಕೌತುಕದ ಕತೆಯಿದು (ತಾತ) ಹೇಳಿದರೆ ಕೇಳುವೆ
(ಈ) ಕಥೆಯ ನಿನಗೆ ತಿಳಿದು ಪೇಳುವೆ । ತನುಜೆ
ಲೋಕದವರಿಗೆಲ್ಲ ಉಪಕಾರ ೫

[**ಇನ್ನೊಂದು ಪಾಠ**:
ಕೌತುಕದ ಕಥೆಯಿದು ತಾತ್ಪರ್ಯದಲಿ ಕೇಳಿದರು
ಈ ಕಥೆಯ ನೀವು ತಿಳಿದು । ಹೇಳಿರೆಂದು
ಲೋಕದವರಿಗೆಲ್ಲ ಉಪಕಾರ]

ಸೂತ ಶೌನಕರಿಗಿಂತೆಂದ್ರು:

ಅದನು ನಾನೇ ಬಲ್ಲೆ ಇದ ನನಗೆ ಹೇಳದಿರು
ಮಧುವಚನದಲಿ ಮನೆಯೋರು । ರಂಜಿಸಿದರೆ
ಸದನವ ದಾಟದಿರು ಕಂಡ್ಯಾ ೬

ಕಂಜಮುಖಿ ಪುರುಷರಿಗೆ ಅಂಜಿ ನಡೆಯಲಿಬೇಕು
ಮಂಜಿನ ರೂಹು ತೊಲಗಿದೇ । ಹೊತ್ತಿನಲಿ
ಸಂಜೇಲಿ ರಜವು ಇರುವಂತೆ ೭

[**ಬೇರೆ ಪಾಠ**:
ಅಂಜಿಮುಖ ಪುರುಷರಿಗೆ ಅಂಜುತಲೆ ನಡೀಬೇಕು
ಸಂಜೆಗಳ ರೂಪು ತೊಲಗಿರೋ । ಹೊತ್ತಿನಲಿ
ಸಂಜೇಲೆ ಲಜ್ಜೆ ಇರುವಂತೆ]

ನಿಂದ್ಯ ಈ ಪರಿಯಿಂದ ಬಂದಲ್ಲದೆ ಬಿಡದು
ಮಂದಮತಿಯಾಗಿ ಕೆಡದಿರು । ಇದಕಿಂತ
ಮುಂದರಿದು ನಡೆವುದದೆ ಲೇಸು ೮

ಕಥಾ ಪ್ರಾರಂಭ

ಹೊಲತಿ ಪತಿಭಕ್ತಿಯಲಿ ಕುಲವಂತೆ ಎನಿಸೋಳು
ಕುಲವಂತೆಯಾಗಿ ಪತಿಭಕ್ತಿ । ಇಲ್ಲದಿರೆ
ಕುಲಹೀನೆಗಿಂತ ಕಡು ಕಷ್ಟ ೯

ಹೊಲೆಜಾತಿಯಲಿ ಹುಟ್ಟಿ ಕುಲಕೆ ಕೀರ್ತಿಯ ತಂದ
ಲಲಿತಾಂಗಿ ಯಾರು (ಈ ಕಥೆಗುತ್ತಮದ) ಕಥೆಯ
ತಿಳಿದು ನಿಮಗಳಿಗದ ಪೇಳ್ವೆ ೧೦

ಮುನಿ ವಸಿಷ್ಠರು ಹಲವು ದಿನ ತಿದ್ದಿ ಋಷಿಋಣವ
ಪಿತೃಋಣವ ತಿದ್ದೋರು ನಮಗಿನ್ನು ದೇವ
ಅನುಕೂಲವಾದ ಸತಿ ಬೇಕು ೧೧

ಹೆಣ್ಣಿನ ಲಕ್ಷಣ

ಸಾಮವರ್ಣದಳಾಗಿ ಸಣ್ಣ ನಡುವಿನೋಳಾಗಿ
ನಾಬಿಟ್ಟ ಹಣೆಯು ಮೂಜಿಟ್ಟು । ಕೊರಳಿನ
ಆ ಹೆಣ್ಣು ಮದುವೆ ಆದೇನು ೧೨

ಅತಿ ಕುಬ್ಜೆಯಲ್ಲದೆ ಅತಿ ದೀರ್ಘೆಯಲ್ಲದೆ
ಅತಿ ತಾರಕೂಚುಕೂಚವಲ್ಲದಿಹ *
ಪತಿವ್ರತೇ ಮದುವೆಯಾದೇನು ೧೩

---

* ಪಾಠಾಂತರ : ಅತಿಕಷ್ಟಗೌಲ ತಾರಕುಚವಲ್ಲದಿಹ. ಎರಡು ಪಾಠಗಳೂ ಅರ್ಥವಾಗುವುದಿಲ್ಲ. ‘ ಅತಿತರ ಕೂಚುಕುಚ ವಲ್ಲದಿಹ ’ ಎಂದು ತಿದ್ದಬಹುದು.

ಹಲ್ಲು ಪುಟ್ಟದು ಆಗಿ ಸೊಲ್ಲು ಮೆಲ್ಲನೆ ಆಗಿ
ಎಲ್ಲ ಲಕ್ಷಣದ ಪತಿವ್ರತೆಯು । ಆಗಿರ್ದ
ನಲ್ಲೆಯನೆ ಮದುವೆಯಾದೇನು ೧೪

[ಹಲ್ಲುದ್ದ ಅಲ್ಲದಳ ಸೊಲ್ಲುದ್ದ ಅಲ್ಲದಳ
ಎಲ್ಲ ಮಾತಿನಲಿ ತನಗನುಕೂಲ । ವಾಗಿರುವ
ವಲ್ಲಭೆಯ ಮದುವೆಯಹೆನೆಂದ ೧೫

ತಲೆ ಪರಟುಕಟ್ಟದಳ ನುಡಿ ಒರಟು ಇಲ್ಲದಳ
ನಿಡು ಮಾರು ಮಂಡೆ ಶ್ಯಾಮವರ್ಣದ ಶುಭದ
ಚೆಲ್ವೇನೆ ಮದುವೆಯಹೆನೆಂದ ೧೬

ಕಾಲುದ್ದ ಅಲ್ಲದಳ ಕೂಡೆ ಐದ್ಬೆರಳು
——ಧರಣೀಲಿ ಮುಟ್ಟಹಳ
ರಾಣೀನೆ ಮದುವೆಯುಹೆನೆಂದ ೧೭

ಹೆಣ್ಣು ಹುಡುಕಿದ್ದು

ಹಾಲು ಮಾರೋ ಕೇರಿ ನೂಲು ಮಾರೋ ಕೇರಿ
ಗಾಣಿಗರ ಕೇರಿಯೊಳಗೆಲ್ಲ । ಹೆಣ್ಣನು
ತಾನು ಮುನಿರಾಯ ಅರಸಿದ ೧೮

ಎಣ್ಣೆ ಮಾರೋ ಕೇರಿ ಬೆಣ್ಣೆ ಮಾರೋ ಕೇರಿ
ಅಕ್ಕಿಗರ ಕೇರಿಯೊಳಗೆಲ್ಲ । ಹೆಣ್ಣನು
ಇನ್ನು ಮುನಿರಾಯ ಅರಸಿದ] ೧೯

ಅಲ್ಲಲ್ಲಿ ಬಿದಿರುಂಟು ಎಲ್ಲಿ ನೋಡಿದರಿಲ್ಲ
ಎಲ್ಲಿ ನೋಡಿದರೂ ತನಗನುಕೂಲ । ವಿಲ್ಲದಿರೆ
ಮೆಲ್ಲನೆ ನಡೆದ ಮುನಿರಾಯ ೨೦

ಕ್ಷತ್ರಿಯ ವೈಶ್ಯ ಶೂದ್ರರಲಿ ಚತ್ತದಲಿ ನೋಡಿದರೆ
ಕ್ಷತ್ರಾದಿ ಧರ್ಮವನು ಅರುಹೋರ । ನಾ ಕಾಣೆ
'ಪುತ್ರಮುಗಮಿಷ್ಯಾಮಿ' ಎನುತಿರ್ದ * ೨೧

ಕುಂಡಗೋಳಕರೆಂಬ ತಂಡದಲಿ ನೋಡಿದರೆ
ಕಂಡದ್ದಿಲ್ಲವೆಂದು ಅವರಾಗಲಿ ಎಂದು
ಚಂಡಾಲ ಕೇರೀನೆ ಹೊಕ್ಕ ೨೨

ಒಂದು ಮನೆಗೆ ಬರಲು ಬಂದನು ಮನೆಯಾತ
ಇಂದು ನಮ್ಮನೆಗಳಿಗೆ ಬರಬಹುದೆ । ನೀವೀಗ
ಎಂದನಾ ಮಾತಿಗಿಂತೆಂದ ೨೩

ನಮ್ಮ ಬಂಧುಗಳಲ್ಲಿ ಕನ್ನಿಕೆಯನ್ ಹುಡುಕಿದೆನು
ಕನ್ಯಾರ್ಥಿಯಾಗಿ ಬಂದೆನ್ನೈ । ನಿನ ಮನೆಗೆ
ನಿನ್ನ ಮಗಳಲ್ಲಿ ಕರಸೆಂದ ೨೪

ಅಷ್ಟು ಅರಿವೇನುಟ್ಟು ಹಟ್ಟೀಲಾಡುವ ಹೆಣ್ಣೆ
ನಿಮ್ಮಪ್ಪ ಕರೆದರು ಒಳಹಿಂಕೆ । ಬಾರೆಂದು
ಮಿತ್ರೆಯರೆಲ್ಲ ನುಡಿದರು ೨೫

* ಈ ಪದ್ಯಕ್ಕೆ ಅರ್ಥ ಸ್ಪಷ್ಟವಾಗುವುದಿಲ್ಲ. 'ನಾಲ್ಕು ವರ್ಣದಲ್ಲೂ ಕನ್ಯೆ ದೊರೆಯಲಿಲ್ಲ' ಎಂದು ಅಭಿಪ್ರಾಯ.

ಕೋಲು ಮುಚ್ಚಲು ಗುಂಡು ಬಾಗಾಲಾಡುವ ಹೆಣ್ಣೆ
ನಿವ್‌ ತಾಯಿ ಕರೆದಽರು ಒಳಹಿಂಕೆ । ಬಾರೆಂದು
ಭಾಮೆಯಽರೆಲ್ಲ ನುಡಿದಽರು ೨೬

ಹೆಣ್ಣಿನ ಪರೀಕ್ಷೆ

[ಈ ಮರಳ ಪಾಕವನು (ಅ)ದಾವಾಕೆ ಮಾಡಿದರೆ
ಆ ಹೆಣ್ಣು ಎನಗೆ ವಧುವೆಂದು । ಬರುವುದು
ಆಹುದೇ ನಿನ್ನ ಕೈಲೆಂದ ೨೭

ಆಹುದೇಸೋ ವಿಪ್ರ ಹೀನಕುಲ ನಮ್ಮದು
ನಾ ನಿನ್ನ ಮನಕೆ ಸರಿಬಾಹೆನೇ । ಎನಲು
ತಾನು ಮುನಿರಾಯ ನಸುನಕ್ಕ ೨೮

ತನ್ನ ದೇಹಾಗ್ನೀಲಿ ಇನ್ನು ಹುತಮಾಡಿದಳು
ಸಣ್ಣ ಮರಳೊಳಗೆ ಪಾಕಗಳು । ಆದಽವು
ಇನ್ನು ಮುನಿರಾಯ ಬೆರಗಾದ] ೨೯

ಮಗಳ ಕರಸೇ ನೋಡಿ ಮನಹಿಗ್ಗಿ ಮುನಿರಾಯ
ಸೊಗಸಿದಳು ಎನ್ನ ಮನಕ್ಕೆ । ಲಕ್ಷಣವಂತೆ
ಮುಗಿಯಿಲ್ಲ ಮದುವೆಗಣಿಮಾಡು ೩೦

ಆಕ್ಷೇಪಣೆ-ಸಮಾಧಾನ

ತಪಸಿಯುತ್ತಮ ನೀನು ಶ್ವಪಚ ಕುಲದವನಾನು
ವಿಪರೀತವಿದು ನಿನ್ನೋರು । ಮೆಚ್ಚೋರೆ
ಅಪವರ್ಗವಿದು ಕೇಳು ಎಂದ ೩೧

ಲಕ್ಷಣವ ಬಲ್ಲೋರು ಪಕ್ಷ ಈತನೆ * ಇದಕೆ
ಈಕ್ಷಣದಲ್ಲೀಕೆಗೆ ಈತನೇ । ಪತಿಯೆಂದು
ಆಕ್ಷಣದಲ್ ಹೊಗಳುತಿಹರು ೨೧

ಮದುವೆಯ ಸಂಭ್ರಮ

ವೇಗ ಸಾಮರ್ಥ್ಯದಲ್ಲಿ ಬೇಗ ನಿರ್ಮಿಸಲಾಯ್ತು
ಬೇಗದಲಿ ಧನಕನಕ ವಸ್ತು ಸಂಪತ್ತು
ಆಗಲೊಪ್ಪಿದವು ಮಣಿಸಾಲು

[ಬೇರೆ ಪಾಠ :
ಆಗಲೊದಗಿತ್ತು ಮುನಿಗಾಗ] ೨೨

ಉಪ್ಪರಿಗೆ ಧವಳಾರ ಚಪ್ಪರಕೆ ಮೇಲ್ಕಟ್ಟು
ಚಿತ್ರ ವಸ್ತುವಿನಿಂದ ಚಿತ್ರ ಮೇಲ್ಕಟ್ಟಿಂದ
ಒಪ್ಪೋರಿಗೆಲ್ಲ ಕೊಡ ದಾನ ೨೪

ತೋರಣದ ಬಾಗಿಲು ತೋರಣಗಳೆಸೆದವೇ
ಸಾರಣೇ ರಂಗವ್ಹೋಲಿಂದ । ಕುಂಕುಮದ
ಕಾರಣೆsಯಿಂದ ಹಸನಾಯ್ತು ೨೫

ಮದುಮಕ್ಕಳಿಬ್ಬರಿಗೆ ಸುದಗೆಣ್ಣೀನೊತ್ತಿ
ಹದನೀರಿನಿಂದ ಮಜ್ಜನವ । ಮಾಡಿದರು
ಬೆಳಗಿತಾರತಿಗೆ ಹರಿವಾಣ ೨೬

* ' ಪಕ್ಷಪಾತವೆ ' ಎಂದಿರಬಹುದೆ ?

ಬಂದಾಗಲೇ ಮುನಿಗೆ ಸಂದಿತೇ ಮಧುಪರ್ಕ
ಬಂದ ಲಗ್ನದಲಿ ಧಾರೆಯ । ನೆರೆದರೆ
(ಆ)ನಂದದಲಿ ಮುನಿಪ ಕೈಕೊಂಡ ೩೭

ಜನನಿಂದೆ

ಮದುವೆಯಾದಾ ದಿವಸ ಕೆದರಿದರೆ ದುರ್ಜನರು
ಸದನದಾ ಬೀದೀಲು ಬೀದೀಲು । ಬುದಿಗಳನೆ
ಮುದಿಯೆನುತಲಿತ್ತು ಪಶುಯೋಗ * ೩೮

ನೋಡಬಹುದೆಂಬೋರು ಕೇಡಿವನಿಗೆಂಬೋರು
ನೋಡಲಿದರ ವೇದಶಾಸ್ತ್ರವ । ನರಿತ
ಮೂಢನಿದ್ದ ಋಷಿಜಾಲ ೩೯

ಬಹಿಷ್ಕಾರ

ದೇವ ಪಿತೃ ಭೂತಗಳು ಕೋವಿದರು ಬಾರದಿರೆ
ಆ ವಿಧವನರಿತ ಮುನಿನಾಥ । ಚಿಂತಿಸೆ
ಆ ವಿಧವನರಿತಳಾ ಕಾಂತೆ ೪೦

ಪತಿವ್ರತೆಯ ಚಿಂತೆ

ಕ್ಷೀರವಿಲ್ಲದ ಧೇನು ವಾರಿಯಿಲ್ಲದ ನದಿ
ತಾಯಿಯಿಲ್ಲದ ಶಿಶುವಿನಂದದಿ
ಬಾಯಿಬಿಡುತಿದ್ದ ಪತಿಶೀಲೆ ೪೧

---

* ಮದುವೆಯಾದ ದಿನ ದುರ್ಜನರು ರೇಗಿ ಬೀದಿಬೀದಿಯಲ್ಲೂ 'ಇವನಿಗೆ ಬುದ್ಧಿ ಕೆಟ್ಟಿದೆ' ಎನ್ನುತ್ತಿದ್ದರು. ಮುದುಕರು 'ಇದೊಂದು ಪಶುಯೋಗ ಆಯಿತು' ಎನ್ನುತ್ತಿದ್ದರು—ಎಂದು ಭಾವ ಇರಬಹುದು.

ತವ್ರರಾಗಾಡೋ ಹೆಣ್ಣು ಇವರಿಗೆ ನೋಡೂತಿತ್ತು
ನೆವನೆವದಲ್ಲಿ ಹಲುಬುತಿರ್ಪೋಳು
ಭವಣೆಗಳುಂಟೆ ಅದರಿಂದ ೪೨

ಅತ್ತಿಗ್ಗ ನಾದಿನಿಗು ತೊತ್ತಾಗಿ ದುಡಿದರೆ
ತುತ್ತನುಂಬಾಗ ಮಿಡುಕೋಳು । ಅವರ್ ತನ್ನ
ನೆತ್ತೀಲಿ ಹೊತ್ತು ಹೇರಾದೆ ೪೩

[ನಾದಿನಿಗು ಅತ್ತಿಗೂ ಕೀಳಾಗಿ ದುಡಿದರೆ
ಕೂಳ ನುಂಗೂವಾಗ ಮಿಡುಕೋಳು । ತಾ ತನ್ನ
ಬೀದಿಯಲಿ ಹೊತ್ತು ಇಳಿಸೆಂಬೋರು] ೪೪

ಕಾಡಕುರುಡಿನ ಕುಬ್ಜ ಮಾಣದಾ ರೋಗಿಷ್ಠ
ಊನವುಳ್ಳ ಪತಿಯುಳ್ಳಳಾದರೂ ತನ್ನ
ಪ್ರಾಣದೊಲ್ಲಭನೆ ಗುರು ದೈವ ೪೫

ಸಿದ್ಧಾರ

ಇಂತೆಂದು ಚಿಂತೇ ಬಿಟ್ಟು ಬಂದು ಗಂಡನ ಕೂಟಿ
ಒಂದು ಯತ್ನವನು ಇದಕೆ । ಮಾಡುವೆನೆಂದ್ಲು
ಮಂದಹಾಸದಲಿ ಮಾಡು ಮಾಡೆಂದ ೪೬

ಪವಾಡ

ಹವ್ಯವಾಹನ ನೀನು ಹವ್ಯವನೆ ಕೊಳ್ಳದಿರು
ಹವ್ಯವನು ಕೊಳ್ಳಲು ಇದು ಎನುತ । ಮೀರಿದರೆ
ಬಹುವಿಧವು ಕೆಡುವುದಿದರಿಂದ ೪೭

ಪರಿಣಾಮ

ಸಾಕ ನರಲೋಕದಲಿ ಪಾಕಶಾಲೆಽ ಇಲ್ಲ
ಬೇಕಾದರಗ್ನಿ ಪಾತಾಳ । ದೊಳಗಿಲ್ಲ
ಕಾಕಾಯ್ತು ಜನರು ಅದರಿಂದ ೪೮

ಅರಣಿಗಳ ಮಥಿಮಥಿಸಿ ತರಣಗುಂದಿತೆ ಮನವು
ಪರಿಪರಿಯ ಕಾಷ್ಠ ಶಿಲೆಗಳಲಿ । ವೈಶ್ವಾ
ನರನು ನೋಡಿದರೂ ಅಲ್ಲಿಲ್ಲ ೪೯

ಪ್ರಶಂಸೆ

[ಚಿಪ್ಪಲ್ಲಿ ಮುತ್ತು ಹುಟ್ಟಿ ಸುಪ್ರಾಣಿ ಆದರದೆ
ಮುಟ್ಟದೆಽ ಬಿಸುಟು ಕಳೆವರೇ । ಕಾಷ್ಠರಲಿ
ಹುಟ್ಟಿದಳು ಆಕೆ ಪತಿವ್ರತೆಯು] ೫೦

ಮನಕೆ ವಾಯು ಶುದ್ಧ ಮನೆಗೆ ಗೋಮಯ ಶುದ್ಧ
ಸ್ಥಾನವು ಶುದ್ಧ ಬುಧಜನಕೆ । ಸ್ತ್ರೀಯರಿಗೆ
ಪತಿಭಕ್ತಿಯಿರಲು ಪರಿಶುದ್ಧ ೫೧

ಹೆಂಡತಿ ನಂದನರ ಕೊಂಡಾಡುವುದೆ ಸಲ್ಲ
ಚಂಡದ ತೇಜ ಇದು ಎನುತ । ಮೀರಿದರೆ
ಕಂಡದ್ದೇಳಿದರೆ ಬಲು ದೋಷ ೫೨

ಶರಣಾಗತಿ

ನಮ್ಮ ಮುಖದಽ ಅಪಹರಣ ನಿಮ್ಮ ಸತಿಯಿಂದಾಯ್ತು
ಸುಮ್ಮನಿರಬೇಡಿ ಆದಿತ್ಯ । ಪೂಜಿದು
ಘಮ್ಮನಗ್ನಿಗಳ ತರಿಸೆಂದ್ರು ೫೩

ಅನುಗ್ರಹ

ಶುಚಿಗಳ ಮನೇ ಅಗ್ನಿ ಶುಚಿಗಳಿಗೆ ಮುಖ್ಯತರ
ಶುಚಿಯಿಲ್ಲದವರ ಮಗಳ । ಮನೆಯಗ್ನಿಗಳು
ಉಚಿತವೇ ನಿಮಗೆ ಹೇಳಿಂದ ೫೪

ತರಿಸು ವಹ್ನೀ ಎನಲು ವರಸತಿಯ ನೋಡಿದನು
ಸರಸರನೆ ಚಿಟಿಲು ಭುಗಿಲೆನುತ । ಲಾ ವಹ್ನಿ
ಕರಸ್ಥಳದಲ್ ಹೊರಟನಾ ವಹ್ನಿ ೫೫

ಸ್ತುತಿ

ಭಾಪು ಭಲೆ ಮುನಿರಾಯ ಕೋಪವೇ ಪುಣ್ಯನಿಧಿ
ಈ ಪರಿಯ ಸತಿಯ ಕಂಡದ್ದಿಲ್ಲऽ । ವೆಂದು
ಭೂಜನವೆಲ್ಲ ಹೊಗಳಿದರು ೫೬

[ಶುಚಿ ನೀನು ಮುನಿರಾಯ ಶುಚಿಯೊಳಗೆ ಉತ್ತಮನು
ಶುಚಿ ನೀನೆ ಮುನಿರಾಯ ಶುಚಿದೀಕ್ಷೆಗೀಕೆ ಗುರು
ಅರುಂಧತಿಯೆಂದು ಶಚಿವಲ್ಲಭನು ಹೆಸರಿಟ್ಟ] ೫೭

ನಿಂದ್ಯರऽ ಮಗಳೆಂದು ನಿಂದ್ಯ ಈಕೇಲಿಲ್ಲ
ನಿಂದ್ಯಳು ಅಲ್ಲ ಅನುಂಧೃತಿ । ಇವಳೆಂದು
ಭೂಜನऽವೆಲ್ಲ ಹೊಗಳಿದರು ೫೮

ಕಾಮಧೇನ ಬಳಸಿ ಕಾಮಿತವ ಪಡೆದಳು
ಕಾಮಿನಿऽ ಸರ್ವಜನರುಣ್ಣ । ಬಡಿಸಿದಳು
ಕಾಮಿತವ ಪಡೆದಳೀ ಕಾಂತೆ ೫೯

ಫಲಸ್ತುತಿ

ನಿತ್ಯ ಹೇಳಿದರೆ ಮುತ್ಯಾರಿಗೆ ತೀರದು
ಅಷ್ಟಮಿ ಚಂಗಮಿ* ದಿವಸದಲಿ । ಹೇಳ್ದೋರ್ಗೆ
ಸತ್ಯಲೋಕದಲಿ ಸುಖವಿರ್ಪುದು ೬೦

ಸಾರಿ ಹೇಳಿದರೆ ಈಗ್ಯಾರಿಗೆ ತೀರದು
ಆದಿತ್ಯವಾರ ಅಮವಾಸ್ಯೆ । ಹೇಳ್ದೋರ್ಗೆ
ಸೂರ್ಯಲೋಕದಲಿ ಸುಖವಿರ್ಪುದು ೬೧

— ಸಂಪೂರ್ಣಂ —

* 'ಪಂಚಮಿ' ಇರಬಹುದು.

ಹೊಲತಿ ಪತಿಭಕ್ತಿಯಲಿ
ಕುಲವಂತೆ ಎನಿಸೋಳು
ಕುಲವಂತೆಯಾಗಿ ಪತಿಭಕ್ತಿ
ಇಲ್ಲದಿರೆ ಕುಲಹೀನೆಗಿಂತ ಕಡು ಕಷ್ಟ

ಶ್ರೀಕಂಠಯ್ಯ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು ನಗರ